**ಕರ್ನಾಟಕ ಸರ್ಕಾರದ ನಡವಳಿ**

**ವಿಷಯ:** ಶ್ರೀ ದೊಡ್ಡನಿಂಗಪ್ಪ, ಪಂ.ಅ.ಅ. ಬಾಣಾವರ ಗ್ರಾಮ ಪಂಚಾಯಿತಿ, ಅರಸಿಕೆರೆ ತಾಲ್ಲೂಕು, ಹಾಸನ ಜಿಲ್ಲೆ ರವರ ವಿರುದ್ಧ ಲೋಕಾಯುಕ್ತ ಪ್ರಕರಣದ ಬಗ್ಗೆ.

**ಓದಲಾಗಿದೆ**

ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ D.O.No. Compt/UPLOK/MYS-7585/2015/ಡಿಆರ್ಇ-5, ದಿನಾಂಕ: 28.06.2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಸೆಕ್ಷನ್ 12(1) ಮತ್ತು 12(3)ರ ಅಡಿಯಲ್ಲಿ ಸಲ್ಲಿಸಿರುವ ದಿನಾಂಕ: 22-06-2017 ರ ವರದಿಯಲ್ಲಿ ದೂರುದಾರರಾದ ಶ್ರೀ ಶ್ಯಾಮಸುಂದರ್ ಬಿನ್ ಬಿ.ವಿ.ಶ್ರೀನಿವಾಸಮೂರ್ತಿ, ಬಾಣಾವರ ಗ್ರಾಮ, ಅರಸಿಕೆರೆ ತಾಲ್ಲೂಕು, ಹಾಸನ ಜಿಲ್ಲೆ ಇವರು ಬಾಣಾವರ ಗ್ರಾಮದಲ್ಲಿ ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿರುವ ಆಸೆಸ್‌ಮೆಂಟ್ ಸಂ.566/466ಸಿ ವಿಸ್ತೀರ್ಣ 40*10 ಮತ್ತು ಆಸೆಸ್‌ಮೆಂಟ್ ಸಂಖ್ಯೆ:466ಸಿ ವಿಸ್ತೀರ್ಣ 9*45 ಅಡಿ ಜಾಗದಲ್ಲಿ ವಾಣಿಜ್ಯ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದಾರೆ. ಖಾಸಗಿ ವ್ಯಕ್ತಿಯಾದ ಶ್ರೀ ಕೆ.ಜಿ.ಪ್ರಕಾಶ್ ರವರ ಹೆಂಡತಿಯ ಹೆಸರಿನಲ್ಲಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿ ಕಾನೂನುಬಾಹಿರವಾಗಿ ಬಾಡಿಗೆ ಪಡೆದಿರುತ್ತಾರೆ. ಈ ಬಗ್ಗೆ ಶ್ರೀ ದೊಡ್ಡನಿಂಗಪ್ಪ, ಪಂ.ಅ.ಅ. ಬಾಣಾವರ ಗ್ರಾಮ ಪಂಚಾಯಿತಿ, ಅರಸಿಕೆರೆ ತಾಲ್ಲೂಕು, ಹಾಸನ ಜಿಲ್ಲೆ ರವರಿಗೆ ಹಲವಾರು ಬಾರಿ ತೆರವುಗೊಳಿಸುವಂತೆ ಮನವಿಗಳನ್ನು ಕೊಟ್ಟರೂ ಸಹ ಕ್ರಮ ಕೈಗೊಂಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ತೆಗೆದುಕೊಳ್ಳಲು ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

ಈ ದೂರಿನ ಮೇಲೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ಮಾಡಿರುವ ಆಪಾದನೆಗಳನ್ನು ಅಲ್ಲಗಳೆದಿದ್ದಾರೆ. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಇ-ಜನಸ್ಪಂದನ, ಕರ್ನಾಟಕ ಸರ್ಕಾರ ಇವರ ಆದೇಶದ ನಕಲನ್ನು ಇ.ಓ.ತಾಲೂಕು ಪಂಚಾಯಿತ್ ಅರಸಿಕೆರೆ ಇವರಿಗೆ ಕಳುಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ. ದೂರುದಾರರು ಸಲ್ಲಿಸಿರುವ ಅರ್ಜಿಯಲ್ಲಿ ಹಲವಾರು ಗೊಂದಲಗಳಿವೆ. ಆದ್ದರಿಂದ ತೆರವುಗೊಳಿಸಲು ಸಾಧ್ಯವಾಗುತ್ತಿಲ್ಲ ಅಂತ ಆಕ್ಷೇಪಣೆಯನ್ನು ಸಲ್ಲಿಸಿದ್ದಾರೆ.

ಎದುರುದಾರರ ಆಕ್ಷೇಪಣೆಗಳ ಮೇಲೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ಅದರಲ್ಲಿ ವಿವಾದಿತ ಸ್ಥಳಕ್ಕೆ ಖುದ್ದು ಭೇಟಿ ನೀಡಿ ಪರಿಶೀಲಿಸಿ, ಬೆಲೆ-ಬಾಳುವ ಪಂಚಾಯತ್ ನಿವೇಶನವನ್ನು ಉಳಿಸಿಕೊಳ್ಳುವಂತೆ ಕೋರಿರುತ್ತಾರೆ.

ಸಂಭಂಧಪಟ್ಟ ಅಧೀನ ಕಾರ್ಯದರ್ಶಿಗಳಿಗೆ ಮತ್ತು ಇ.ಓ, ತಾಲ್ಲೂಕು ಪಂಚಾಯತ್, ಅರಸಿಕರೆ ಇವರಿಗೆ ಪ್ರಕರಣವನ್ನು ವಹಿಸಿಕೊಡುವ ವಿಷಯದಲ್ಲಿ ಅಥವಾ ನಿವೇಶನವನ್ನು ವಾಪಸ್ಸು ಪಡೆಯುವಲ್ಲಿ ಏನು ಕ್ರಮ ಜರುಗಿಸಲಾಗಿದೆ ಅಂತ ಎದುರುದಾರರಿಂದ ವರದಿಯನ್ನು ಕೆಳಲಾಗಿದೆ. ಎದುರುದಾರರು ತಮ್ಮ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ದಿ:02-05-2015 ರ ತಾಲ್ಲೂಕು ಪಂಚಾಯತ್ ಸಾಮಾನ್ಯ ಸಭೆಯ ನಿರ್ಣಯದಂತೆ ಫಲಾನುಭವಿಗಳಿಗೆ ನಿವೇಶನ ಮಂಜೂರುಮಾಡಲು ಪಂಚಾಯತ್ ರಾಜ್ ಅಧಿನಿಯಮ ಕಲಂ 209 ರ ಪ್ರಕಾರ ಉಪನೊಂದಣಾಧಿಕಾರಿಗಳ ಮಾರುಕಟ್ಟೆ ಬೆಲೆಯ ದರದಲ್ಲಿ ಕಿಮ್ಮತ್ತು ಕಟ್ಟಿಸಿಕೊಂಡು, ಸದರಿಯವರಿಗೆ ಮಂಜೂರು ಮಾಡಿಸಲು ಆದೇಶಿಸಿದ್ದಾರೆ. ಆದರೆ ಗ್ರಾಮ ಪಂಚಾಯತ್ ಸದಸ್ಯರು, ಬಾಣಾವರ ಗ್ರಾಮಸ್ಥರು ಮನವಿ ಸಲ್ಲಿಸಿ ಅಕ್ರಮ ನಿವೇಶನದಲ್ಲಿ ವಾಸವಾಗಿರುವುದನ್ನು ತೆರವುಗೊಳಿಸಲು ಕ್ರಮವಹಿಸಲು ಕೋರಿಕೊಂಡಿದ್ದಾರೆ. ಇದರ ಮೇಲೆ ತಾಲೂಕು ಪಂಚಾಯತ್ ಕಾರ್ಯಾಲಯದ ಅಧಿಕಾರಿಗಳು ಕೂಡಲೇ ತೆರವುಗೊಳಿಸುವಂತೆ ಜ್ಞಾಪನ ಪತ್ರವನ್ನು ಕೊಟ್ಟಿರುತ್ತಾರೆ. 2 ಪತ್ರಗಳನ್ನು ಸಾಮಾನ್ಯ ಸಭೆಯಲ್ಲಿ ಚರ್ಚೆ ಮಾಡಲು ಇಟ್ಟಾಗ 12 ಜನ ಸದಸ್ಯರು ಮಂಜೂರು ಮಾಡಬೇಕಂದು, 7 ಜನರು ಕಟ್ಟಡ ತೆರವುಗೊಳಿಸಿ ಪಂಚಾಯತ್‌ಗೆ ವಹಿಸಿಕೊಡಲು ತಿಳಿಸಿದ್ದಾರೆ. ಆದ್ದರಿಂದ ಕ್ರಮವನ್ನು ಕೈಗೊಳಲು ಸಾಧ್ಯವಾಗುತ್ತಿಲ್ಲ ಎಂದು ಹೇಳಿರುತ್ತಾರೆ.

ಈ ಪ್ರಕರಣದ ಸಂಪೂರ್ಣ ಕಡತವನ್ನು ಪರಿಶೀಲಿಸಿದ್ದೇನೆ. ಕಲಂ 209 ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದಡಿ ಗ್ರಾಮ ಪಂಚಾಯತಿಕಯು ಆಸ್ತಿಗಳನ್ನು ಅರ್ಜಿಸಬಹುದು ಮತ್ತು ಅವುಗಳನ್ನು ವಿಲೇವಾರಿ ಮಡಬಹುದು ಎನ್ನುವ ಬಗ್ಗೆ ಇದೆ. ಸರ್ಕಾರವು ವಿಧಿಸಿರುವ ನಿಯಮಗಳಂತೆ ಮಾತ್ರಕ್ರಮ ಕೈಗೊಳ್ಳಲು ಪಂಚಾಯಿತಿಗೆ ಅಧಿಕಾರ ಇರುತ್ತದೆ. ದಿನಾಂಕ: 02-05-2016 ರಂತೆ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮಸ್ಥರ ಅರ್ಜಿಯನ್ನು ಪರಿಶೀಲಿಸಿ ಅಕ್ರಮವಾಗಿ ನಿವೇಶನ, ಮನೆ ಕಟ್ಟಿದ್ದರೆ ತೆರವುಗೊಳಿಸಲು ಕ್ರಮ ವಹಿಸುವಂತೆ ಸೂಚಿಸಿದ್ದಾರೆ. ದಿ: 14-07-2015 ರಂದು ಅಂದರೆ ಇದಕ್ಕೂ ಹಿಂದೆ, ದಿ:20-01-2015 ಗ್ರಾಮ ಪಂಚಾಯಿತಿಯ ನಿರ್ಣಯದದಂತೆ ಮಾರುಕಟ್ಟೆಯ ದರ ಕಟ್ಟಿಸಿಕೊಡು ಹಾಲಿ ಅನುಭವದಾರರಿಗೆ ಮಂಜೂರು ಮಾಡಲು ಪಿ.ಡಿ.ಓ ರವರಿಗೆ ಸಭಾ ನಿರ್ಣಯದಂತೆ ಕ್ರಮ

ಕೈಗೊಳ್ಳಲು ಆದೇಶಿಸಿದ್ದಾರೆ. ದಿ:02-05-2016 ರ ಕಾರ್ಯನಿರ್ವಾಹಕ ಅಧಿಕಾರಿಗಳ ಆದೇಶವನ್ನು ಎದುರುದಾರರು ಪಾಲಿಸಿಲ್ಲ. ಇದಕ್ಕೂ ಹಿಂದಿನ ಪಂಚಾಯತಿಯ ಸಭಾನಿರ್ಣಯದ ಪ್ರಕಾಂಸಸಸ ಮಾರುಕಟ್ಟೆಯ ಕಿಮ್ಮತ್ತು ಕಟ್ಟಿಸಿಕೊಂಡು ಇದರಲ್ಲಿ ಹಲವಾರು ಗೊಂದಲಗಳಿವೆ ಅಂತ ಹೇಳಿದ್ದಾರೆ. ಎದುರುದಾರರು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರ ಆದೇಶವನ್ನು ಪಾಲನೆ ಮಾಡದೇ ಕರ್ತವ್ಯಲೋಪ ಎಸಗಿದ್ದಾರೆ ಎನ್ನಲು ಸಾಕಷ್ಟು ಆಧಾರಗಳಿವೆ. ತಾಲ್ಲೂಕು ಪಂಚಾಯತ್ ಅಧಿಕಾರಿಗಳ ನಿರ್ದೇಶನದಂತೆ ಯಾವುದೇ ಸಭೆ ಕರೆಯದೇ, ಸಭೆಯ ಮುಂದೆ ಅನಧಿಕೃತ ಕಟ್ಟಡದ ವಿಷಯವನ್ನು ಸಹ ಮಂಡಿಸದೇ ಕರ್ತವ್ಯಲೋಟ ಎಸಗಿರುತ್ತಾರೆ.

ದೂರಿನಂಶಗಳನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ಸದರಿ ದೂರುದಾರರ ದೂರು ಅರ್ಜಿ ಮತ್ತು ಮಾನ್ಯ ಉಪಲೋಕಾಯುಕ್ತ ವರದಿಯಂತೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮ 3(1) (ii) ಮತ್ತು (iii) ರಲ್ಲಿ ಹೇಳಿದಂತೆ ಎದುರುದಾರರಾದ ಶ್ರೀ ದೊಡ್ಡನಿಂಗಪ್ಪ, ಪಂ.ಅ.ಅ. ಬಾಣಾವರ ಗ್ರಾಮ ಪಂಚಾಯಿತಿ, ಅರಸಿಕೆರೆ ತಾಲ್ಲೂಕು, ಹಾಸನ ಜಿಲ್ಲೆ ಇವರು ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪ್ರಾಮಾಣಿಕತೆ,ಸಂಪೂರ್ಣ ನಿಷ್ಠೆ ತೋರದೆ, ಕರ್ತವ್ಯಲೋಪವೆಸಗಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದದುಕೊಂಡಿರುವುದರಿಂದ ಕರ್ನಾಟಕ ನಾಗರೀಕ ಸೇವಾ (ವರ್ಗಿಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮ 1957 ರ 14-ಎ ರನ್ವಯ ಎದುರುದಾರರ ವಿರುದ್ಧ ವಿಚಾರಣೆ ಮಾಡಲು ಈ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ನಿರ್ಣಯಿಸಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/567/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 17-07-2017</u>**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ದೊಡ್ಡನಿಂಗಪ್ಪ, ಪಂ.ಅ.ಅ. ಬಾಣಾವರ ಗ್ರಾಮ ಪಂಚಾಯಿತಿ, ಅರಸಿಕೆರೆ ತಾಲ್ಲೂಕು, ಹಾಸನ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಾವಳಿಗಳ ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಟಿ.ವಿ. ಅರುಣ್‌ಕುಮಾರ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು,ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.(ಇದರೊಂದಿಗೆ ಈ ಪ್ರಕರಣದ ಮೂಲ ದಾಖಲಾತಿಯನ್ನು ಪುಟ ಸಂಖ್ಯೆ 01 ರಿಂದ 134 ರವರೆಗೆ ಲಗತ್ತಿಸಲಾಗಿದೆ.)
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಹಾಸನ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಅರಸಿಕೆರೆ ತಾಲ್ಲೂಕು, ಹಾಸನ ಜಿಲ್ಲೆ.
6. ಶ್ರೀ ದೊಡ್ಡನಿಂಗಪ್ಪ, ಪಂ.ಅ.ಅ. ಬಾಣಾವರ ಗ್ರಾಮ ಪಂಚಾಯಿತಿ, ಅರಸಿಕೆರೆ ತಾಲ್ಲೂಕು, ಹಾಸನ ಜಿಲ್ಲೆ.
7. ಗಣಕ ಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.